ವಿಜಯ ಕರ್ನಾಟಕ

# ಜ್ಞಾನದಾಹ ಇಂಗಿಸುವ ದೇಗುಲ

ಚಿತ್ರ: ರವೀಂದ್ರ ನಾಯಕ್

ವಿದ್ಯಾರಶ್ಮಿ ಪೆಲತ್ತಡ್ಕ

ವಿಶ್ವವಿದ್ಯಾಲಯವೆಂದರೆ ಉನ್ನತ ಶಿಕ್ಷಣದ ಕೇಂದ್ರ. ಸಂಶೋಧನೆಗಳ ಆಕರ ಸ್ಥಾನ. ಇಂತಹ ವಿವಿಯೊಂದನ್ನು ಕಟ್ಟಿ ಬೆಳೆಸುವುದು ಸುಲಭವೇನಲ್ಲ. ಇದೀಗ ಖಾಸಗಿ ಸಂಸ್ಥೆಗಳೂ ವಿವಿಗಳನ್ನು ಸ್ಥಾಪಿಸುವ ಸಾಹಸಕ್ಕಿಳಿದಿವೆ. ಶಿಕ್ಷಣ ಕ್ಷೇತ್ರದಲ್ಲಿ ದೊಡ್ಡ ಹೆಸರನ್ನೇ ಮಾಡಿರುವ ಎಂ.ಎಸ್.ರಾಮಯ್ಯ ಸಂಸ್ಥೆಯೂ ಎಂ.ಎಸ್.ರಾಮಯ್ಯ ಯೂನಿವರ್ಸಿಟಿ ಸ್ಥಾಪಿಸಿದ್ದು, ಈ ವಿವಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಕಾರ್ಯಾರಂಭ ಮಾಡಿದೆ.

1500ರಿಂದ 1800 ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮಾಡುವ ಅವಕಾಶವುಳ್ಳ ಈ ವಿವಿಯಲ್ಲಿ 500 ಬೋಧಕ ಸಿಬ್ಬಂದಿ ಇದ್ದಾರೆ. ಡಾ. ಎಂ.ಆರ್.ಜಯರಾಮ್ ಎಂ.ಎಸ್.ರಾಮಯ್ಯ ವಿಶ್ವವಿದ್ಯಾಲಯದ ಚಾನ್ಸೆಲರ್ ಆಗಿದ್ದು, ಪ್ರೊ. ಎಸ್. ಆರ್. ಶಂಕಪಾಲ್ ವೈಸ್ ಚಾನ್ಸೆಲರ್ ಆಗಿದ್ದಾರೆ. ವಿಶ್ವವಿದ್ಯಾಲಯದ ಶೈಕ್ಷಣಿಕ ಆಗುಹೋಗುಗಳೆಲ್ಲವನ್ನೂ ಆಸ್ಥೆಯಿಂದ ರೂಪಿಸಿರುವ, ತಮ್ಮ ಸಮಯವನ್ನೆಲ್ಲ ವಿವಿಗಾಗಿ ಮೀಸಲಿಟ್ಟಿರುವ 54 ವರ್ಷ ವಯಸ್ಸಿನ ಪ್ರೊ.ಎಸ್.ಆರ್. ಶಂಕಪಾಲ್ ತಮ್ಮ ವಿವಿ, ಅದರ ವೈಶಿಷ್ಟ್ಯದ ಬಗೆಗೆ ಲವಲವಿಕೆಯ ಜತೆ ಹೇಳಿಕೊಂಡದ್ದು ಹೀಗೆ:

**ಈ ವಿವಿ ಆರಂಭಿಸಿರುವ ಉದ್ದೇಶವೇನು?**

ಇಂದಿನ ದಿನಗಳಲ್ಲಿ ಸಂಶೋಧನೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಈ ಉದ್ದೇಶದಿಂದ ಈ ವಿವಿಯನ್ನು ಆರಂಭಿಸಲಾಗಿದೆ. ಇನ್ನೊಂದು ಉದ್ದೇಶವೂ ಇದೆ. ಇಂದು ಪಿಯುಸಿ ಓದಿ ಹೊರಬರುವ ಪ್ರತಿಭಾವಂತ ವಿದ್ಯಾರ್ಥಿಗಳಿರುತ್ತಾರಲ್ಲ (ಉದಾ: ಸಿಇಟಿಯಲ್ಲಿ ಟಾಪ್ 500 ರ್‍ಯಾಂಕ್ ಬರುವ ವಿದ್ಯಾರ್ಥಿಗಳು), ಅವರ ಜ್ಞಾನದಾಹ ಎಷ್ಟಿರುತ್ತದೆ ಎಂದರೆ ಅವರ ತಹತಹಿಕೆಗೆ ಸಮನಾದ ಜ್ಞಾನ, ಸ್ಕಿಲ್ ನೀಡುವ ಕಾಲೇಜುಗಳೇ ನಮ್ಮಲ್ಲಿಲ್ಲ.




## ಎಂ.ಎಸ್.ರಾಮಯ್ಯ ವಿವಿಯಲ್ಲಿನ ಕೋರ್ಸ್‌ಗಳು

ಬಿಟೆಕ್ (ಸಿವಿಲ್, ಕಂಪ್ಯೂಟರ್ ಸೈನ್ಸ್, ಇಲೆಕ್ಟ್ರಿಕಲ್ಸ್ ಅಂಡ್ ಇಲೆಕ್ಟ್ರಾನಿಕ್ಸ್, ಇಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಎಂಜಿನಿಯರಿಂಗ್, ಮೆಕ್ಯಾನಿಕಲ್ ಎಂಜಿನಿಯರಿಂಗ್), ಎಂಟೆಕ್(20 ವಿಷಯಗಳಲ್ಲಿ), ಬಿ ಡಿಸೈನ್, ಎಂ ಡಿಸೈನ್, ಬಿಡಿಎಸ್, ಬಿಎಚ್‌ಎಮ್, ಎಂಎಚ್‌ಎಮ್, ಬಿಫಾರ್ಮ್, ಎಂ ಫಾರ್ಮ್, ಡಾಕ್ಟರ್ ಆಫ್ ಫಾರ್ಮಸಿ, ಎಂಎಚ್‌ಎ, ಎಮ್ಮೆಸ್ಸಿ, ಎಂಕಾಂ, ಎಂಡಿಎಸ್, ಎಂಬಿಎ, ಪಿಎಚ್‌ಡಿ.

**ಆರ್ಟ್ ಅಂಡ್ ಡಿಸೈನ್**

ರಾಮಯ್ಯ ವಿವಿ ಅಳವಡಿಸಿಕೊಂಡಿರುವ, ಕರ್ನಾಟಕದಲ್ಲೇ ಹೊಸದೆನಿಸುವ ನೂತನ ಕೋರ್ಸ್ ಇದು. ಇದರಲ್ಲಿ ಯಾವುದೇ ವಸ್ತುವನ್ನು ವಿನ್ಯಾಸ ಮಾಡುವ ಬಗೆಯನ್ನು ಕಲಿಸಲಾಗುತ್ತದೆ. ಉದಾ: ಕಾರಿನ ಒಳಭಾಗದ ಎಂಜಿನ್ ಅನ್ನು ಎಂಜಿನಿಯರ್ ತಯಾರಿಸಿದರೆ ಕಾರಿನ ಹೊರಭಾಗವನ್ನು ಡಿಸೈನ್ ಮಾಡಲು ವಿನ್ಯಾಸ ತಯಾರಕರೊಬ್ಬರು ಬೇಕೇ ಬೇಕು. ಇದೇ ರೀತಿ ಪೆನ್ ಒಂದರ ವಿನ್ಯಾಸ, ಬಾಟಲ್, ಕಾರು, ಆಭರಣ, ಪೀಠೋಪಕರಣ... ಹೀಗೆ ಬಗೆಬಗೆಯ ವಸ್ತುಗಳ ವಿನ್ಯಾಸವನ್ನು ಮಾಡುವ ಕೌಶಲವನ್ನು ಈ ಕೋರ್ಸ್ ಕಲಿಸುತ್ತದೆ. ಈ ಕೋರ್ಸ್‌ನ ಪದವಿ ತರಗತಿ (ಬಿ ಡಿಸೈನ್)ಗೆ ಸೇರಬೇಕೆಂದರೆ ವಿದ್ಯಾರ್ಥಿ ದ್ವಿತೀಯ ಪಿಯುಸಿ ಉತ್ತೀರ್ಣರಾಗಿದ್ದರೆ ಸಾಕು. ವಿದ್ಯಾರ್ಥಿಗಳು ಇದರ ಮೂಲಕ ಸ್ವಂತ ಉದ್ಯಮವನ್ನೂ ಸ್ಥಾಪಿಸಬಹುದು.

## ಯಶೋಗಾಥೆ

ಪ್ರೊ. ಎಸ್.ಆರ್.ಶಂಕಪಾಲ್, ವೈಸ್ ಚಾನ್ಸೆಲರ್
ಎಂ.ಎಸ್.ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸಸ್

ಆಧಾರಿತ ಶಿಕ್ಷಣ (ಔಟ್‌ಕಮ್ ಬೇಸ್ಡ್ ಎಜುಕೇಷನ್)'. ಇದರ ಪ್ರಕಾರ ನಾವು ಮೊದಲೇ ಇಂತಹ ಕೋರ್ಸ್‌ಗಳನ್ನು ನೀಡುತ್ತಿದ್ದೇವೆಂದು ಘೋಷಿಸಿ ಅದಕ್ಕೆ ತಕ್ಕ

ತರುತ್ತಾರೆ. ಡಿಆರ್‌ಡಿಒ, ಡಿಎಸ್‌ಡಿ, ಇಸ್ರೊ ಮೊದಲಾದ ಸರ್ಕಾರಿ ಹಾಗೂ ಇನ್ನೂ ಹಲವಾರು ಖಾಸಗಿ ಕಂಪೆನಿಗಳಿಂದ ಸಂಶೋಧನೆಗೆ ಅನುದಾನ, ನೆರವು ಸಿಗುತ್ತಿದ್ದು ನಮ್ಮ ಬೋಧಕ ಸಿಬ್ಬಂದಿ ಈಗಾಗಲೇ 90ಕ್ಕಿಂತಲೂ ಹೆಚ್ಚು ಅನುದಾನಿತ ಸಂಶೋಧನೆಗಳನ್ನು ಕೈಗೊಂಡಿದ್ದಾರೆ. 50ಕ್ಕೂ ಹೆಚ್ಚು ಪೇಟೆಂಟ್‌ಗಳಿಗೆ ಅರ್ಜಿ ಸಲ್ಲಿಸಲಾಗಿದೆ. ಏಳು ಲಕ್ಷ ರೂ.ವರೆಗೆ ಸಂಶೋಧನೆಗಳಿಗೆ ನಾವು

**ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುತ್ತೀರಾ?**

ಶೇ.40ರಷ್ಟು ವಿದ್ಯಾರ್ಥಿಗಳನ್ನು ಸಿಇಟಿ ಅಂಕದ ಆಧಾರದಲ್ಲಿ ಸರ್ಕಾರಿ ಶುಲ್ಕದ ಮೇಲೆ ತೆಗೆದುಕೊಳ್ಳುತ್ತೇವೆ. ಶೇ.60ರಷ್ಟು ವಿದ್ಯಾರ್ಥಿಗಳಿಗೆ ವಿವಿ ಶುಲ್ಕದ ಅನ್ವಯ ಪ್ರವೇಶ ನೀಡುತ್ತೇವೆ. ಪ್ರತಿವರ್ಷ ಮೂರರಿಂದ ನಾಲ್ಕು ಶೇಕಡಾದಷ್ಟು ಆರ್ಥಿಕ ಹಿನ್ನೆಲೆ, ಪ್ರತಿಭೆ ಗಮನಿಸಿ ಶುಲ್ಕ ವಿನಾಯಿತಿ ಮಾಡುತ್ತೇವೆ.

**ವಿವಿ ಆರಂಭಿಸುವಾಗ ಸವಾಲು ಅನಿಸಿದ್ದು ಏನು?**

ನಮ್ಮ ಎಂ.ಎಸ್. ರಾಮಯ್ಯ ಸಂಸ್ಥೆಗೆ ಐದಾರು ದಶಕಗಳ ಇತಿಹಾಸವಿದೆ. ಹೀಗಾಗಿ ಅಂತಹ ಕಷ್ಟ ಏನಾಗಲಿಲ್ಲ. ಒಂದು ಸಮರ್ಥ ತಂಡ ಕಟ್ಟುವುದು ಮುಖ್ಯವಾಗುತ್ತದೆ. ಇದಕ್ಕೆ ಸೂಕ್ತ ಜನರು ಸಿಗುವುದು ಕಷ್ಟವೇ. ಜತೆಗೆ ಹಣಕಾಸಿನ ಬೆಂಬಲ, ತರಬೇತಿ, ನೇಮಕಾತಿ ಹೀಗೆ ಹಲವಾರು ವಿಷಯಗಳಲ್ಲಿ ಸವಾಲುಗಳು ಎದುರಾಗಿದ್ದವು. ಎಲ್ಲವನ್ನೂ ನಿಭಾಯಿಸಿಕೊಂಡು ಇಲ್ಲಿಯವರೆಗೆ ಬಂದಿದ್ದೇವೆ.

**ಸ್ಪರ್ಧೆ ಎದುರಿಸುತ್ತಿದ್ದೀರಾ?**

ಈಗ ಇಲ್ಲ. ನಮ್ಮ ಸಂಸ್ಥೆಗೂ ಹೆಸರು ಇರುವುದರಿಂದ ವಿದ್ಯಾರ್ಥಿಗಳು ಬರುತ್ತಿದ್ದಾರೆ. ಆದರೆ ಇನ್ನು ಹತ್ತು ವರ್ಷ ಕಳೆದ ಬಳಿಕ ಇನ್ನೂ ಹಲವು ವಿವಿಗಳ ಸ್ಥಾಪನೆಯಾದ ಬಳಿಕ ಪರಸ್ಪರ ಹೋಲಿಸಿ ನೋಡುವುದು ಇತ್ಯಾದಿ ಆರಂಭವಾಗುತ್ತದೆ. ಆಗ

ಇಂತಹ ಟಾಪ್ ವಿದ್ಯಾರ್ಥಿಗಳ ವಿದ್ಯಾಕಾಂಕ್ಷೆಯನ್ನು ಸಮರ್ಪಕ ರೀತಿಯಲ್ಲಿ ಪೂರೈಸುವ ಮಟ್ಟದ ಶಿಕ್ಷಣವನ್ನು ನೀಡಬೇಕು ಎಂಬ ಗುರಿ ಇದೆ.

**ನಿಮ್ಮ ವಿವಿಯ ಪ್ರೋಗ್ರಾಮ್‌ಗಳ ವಿಶೇಷತೆ ಏನು?**

ಇಲ್ಲಿ ಸಂಶೋಧನಾ ಪ್ರೋಗ್ರಾಮ್‌ಗಳನ್ನು ಎಂಟು ಫ್ಯಾಕಲ್ಟಿ ಅಥವಾ ವಿಭಾಗಗಳನ್ನಾಗಿ ವಿಭಜಿಸಲಾಗಿದೆ. ಎಂಜಿನಿಯರಿಂಗ್ ಅಂಡ್ ಟೆಕ್ನಾಲಜಿ, ಆರ್ಟ್ ಅಂಡ್ ಡಿಸೈನ್, ಮ್ಯಾನೇಜ್‌ಮೆಂಟ್ ಅಂಡ್ ಕಾಮರ್ಸ್, ಹಾಸ್ಪಿಟಾಲಿಟಿ ಮ್ಯಾನೇಜ್ ಮೆಂಟ್ ಅಂಡ್ ಕೇಟರಿಂಗ್ ಟೆಕ್ನಾಲಜಿ, ಸೈನ್ಸಸ್ ಅಂಡ್ ಹ್ಯುಮಾನಿಟೀಸ್, ಡೆಂಟಲ್ ಸೈನ್ಸಸ್, ಫಾರ್ಮಸಿ ಹಾಗೂ ಆಯುರ್ವೇದ. ಆಯುರ್ವೇದ ವಿಭಾಗದಲ್ಲಿ ಇನ್ನೂ ಕೋರ್ಸ್‌ಗಳನ್ನು ಆರಂಭಿಸಿಲ್ಲ. ಮುಂದಿನ ವರ್ಷದಿಂದ ಆರಂಭಿಸಲಾಗುವುದು.

ಇಲ್ಲಿ ವಾಷಿಂಗ್ಟನ್ ಅಕಾರ್ಡ್ ಎಂಬ ಅಂತಾರಾಷ್ಟ್ರೀಯ ಅಕ್ರೆಡಿಟೇಷನ್ ಪದ್ಧತಿಯನ್ವಯ ಸಿಲಬಸ್ ರೂಪಿಸಿದ್ದೇವೆ. ಇದಕ್ಕೆ ಸಹಿ ಮಾಡಿದಲ್ಲಿ ಇಲ್ಲಿಯ ಶಿಕ್ಷಣದ ಮಟ್ಟ ಅಂತಾರಾಷ್ಟ್ರೀಯ ಶಿಕ್ಷಣದ ಮಟ್ಟಕ್ಕೆ ಸಮವಾಗುತ್ತದೆ. ಇಲ್ಲಿ ಅರ್ಧ ಓದಿದ ವಿದ್ಯಾರ್ಥಿ ವಿದೇಶೀ ವಿವಿಯಲ್ಲೂ ಓದು ಮುಂದುವರಿಸಬಹುದು. ಇದರ ವಿಶೇಷತೆಯೆಂದರೆ 'ಫಲಿತಾಂಶ ಸಿಲಬಸ್ ರೂಪಿಸುವುದಲ್ಲ. ಬದಲಾಗಿ, ಕೋರ್ಸ್ ಮುಗಿಸಿ ಹೊರ ಹೋಗುವಾಗ ವಿದ್ಯಾರ್ಥಿಗಳ ಜ್ಞಾನ, ಪ್ರಾಯೋಗಿಕ ಕೌಶಲ, ಅರಿವಿನ ಸಾಮರ್ಥ್ಯ, ಜ್ಞಾನವನ್ನು ಕಾರ್ಯವಾಗಿ ಪರಿವರ್ತಿಸುವ ಶಕ್ತಿ ಎಷ್ಟು ಇರಬೇಕು ಎಂಬುದನ್ನು ಯೋಜಿಸಿ, ಇದನ್ನೇ ಟಾರ್ಗೆಟ್ ಆಗಿ ಇರಿಸಿ ಇದಕ್ಕೆ ತಕ್ಕಂತೆ ನಾವು ಸಿಲಬಸ್ ರೂಪಿಸುತ್ತೇವೆ. ಜಾಗತಿಕವಾದ ಮಾರುಕಟ್ಟೆಯ ಅಗತ್ಯಕ್ಕೆ ತಕ್ಕಂತೆ ವಿದ್ಯಾರ್ಥಿಗಳನ್ನು ತಯಾರು ಮಾಡುತ್ತೇವೆ. ಈ ಬಗೆಯ ಶಿಕ್ಷಣ ಕೊಡುವ ಸಂಸ್ಥೆ ಬೇರೆಲ್ಲೂ ಇಲ್ಲ.

ಇದಲ್ಲದೆ ಸ್ನಾತಕೋತ್ತರ ತರಗತಿಗಳಿಗೆ ಮೊಡ್ಯೂಲ್‌ಗಳನ್ನು ಅಳವಡಿಸಿದ್ದೇವೆ. ಇದರಲ್ಲಿ ಕ್ರೆಡಿಟ್ ಆಧಾರದಲ್ಲಿ ಶಿಕ್ಷಣ ನಡೆಯುತ್ತದೆ. ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಬುದ್ಧಿಮತ್ತೆಯನ್ನು, ಗ್ರಹಿಕೆಯನ್ನು, ಯೋಚನಾ ವಿಧಾನವನ್ನು ಪರೀಕ್ಷಿಸುವ ಪ್ರಶ್ನೆಗಳನ್ನು ನೀಡಲಾಗುತ್ತದೆ. ಇದರಲ್ಲಿ ಥಿಯರಿಗಿಂತ ಅಸೈನ್‌ಮೆಂಟ್‌ಗೆ ಹೆಚ್ಚು ಪ್ರಾಮುಖ್ಯವಿರುತ್ತದೆ.

**ವಿದ್ಯಾರ್ಥಿಗಳಿಗೆ ಇಲ್ಲಿ ಸಿಗುವ ವಿಶೇಷ ಸೌಲಭ್ಯ, ಅವಕಾಶಗಳೇನು?**

ಶ್ರೇಷ್ಠ ಮಟ್ಟದ ಬೋಧಕ ಸಿಬ್ಬಂದಿ ನಮ್ಮಲ್ಲಿ ಇದ್ದಾರೆ. ಉದ್ಯಮದಲ್ಲಿ ಅನುಭವ ಇರುವವರು, ಉತ್ಸಾಹೀ ತರುಣರ ಸಮಗ್ರ ತಂಡ ಇದು. ಇಲ್ಲಿ ಪ್ರಾಧ್ಯಾಪಕರೇ ಸಂಶೋಧನೆಗಳಿಗಾಗಿ ಫಂಡಿಂಗ್ ಸಹಾಯ ಮಾಡುತ್ತೇವೆ, ವಿದ್ಯಾರ್ಥಿಗಳಿಗೆ ಪೇಟೆಂಟ್ ಪಡೆಯಲೂ ನೆರವಾಗುತ್ತೇವೆ. ವಿದ್ಯಾರ್ಥಿಯು ಏಕಕಾಲದಲ್ಲಿ ನಮ್ಮ ವಿವಿ, ಇನ್ನೊಂದು ಪಾಲುದಾರ ವಿವಿಯಲ್ಲಿ ಸಂಶೋಧನೆ ಮಾಡಿ ಪಿಎಚ್‌ಡಿ ಪದವಿ ಪಡೆಯುವ 'ಸ್ಪ್ಲಿಟ್ ಪಿಎಚ್‌ಡಿ' ಪ್ರೋಗ್ರಾಮ್ ಅನ್ನು ಕೂಡ ಇಲ್ಲಿ ಕೊಡಮಾಡುತ್ತಿದ್ದೇವೆ. ವಿದ್ಯಾರ್ಥಿಗಳ ಸಂಶೋಧನೆ, ಪ್ರಾಡಕ್ಟ್ ವಿನ್ಯಾಸ, ಉದ್ಯಮಶೀಲತೆಯ ಚಟುವಟಿಕೆಗಾಗಿಯೇ 'ಟೆಕ್ನೊ ಸೆಂಟರ್'ಗಳಿವೆ.

ಇದಲ್ಲದೆ ಸುಮಾರು 650 ಖಾಸಗಿ ಕಂಪೆನಿಗಳಿಗೆ ನಮ್ಮ ಪ್ರಾಧ್ಯಾಪಕರೇ ಹೋಗಿ ಕಾರ್ಪೊರೇಟ್ ತರಬೇತಿ ನೀಡುತ್ತಾರೆ. ಈ ಮೂಲಕ ನಮಗೆ ಉದ್ಯಮದ ಒಳನೋಟ ಸಿಗುತ್ತದೆ, ಉಪನ್ಯಾಸಕರು ದಿನದಿನವೂ ಅಪ್‌ಡೇಟ್ ಕೂಡ ಆಗುತ್ತಾರೆ. ಅದೆಷ್ಟೋ ಕಂಪೆನಿಗಳು ತಮಗೆ ಕಷ್ಟವಾದ ಸಂಕೀರ್ಣವಾದ ಪ್ರಾಜೆಕ್ಟ್‌ಗಳ ಅನುಷ್ಠಾನಕ್ಕೆ ನಮ್ಮ ನೆರವು ಪಡೆಯುವುದೂ ಇದೆ.

ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ 25 ಜನ ಸಂಪನ್ಮೂಲ ವ್ಯಕ್ತಿಗಳ ಸ್ಟೂಡೆಂಟ್ ವೆಲ್‌ಫೇರ್ ಡಿವಿಷನ್ ಇದೆ. ವಿದ್ಯಾರ್ಥಿಗಳ ಇಂಟರ್ನ್ ಶಿಪ್, ಔದ್ಯೋಗಿಕ ಮಾಹಿತಿ ಎಲ್ಲವನ್ನೂ ನೀಡಲಾಗುತ್ತದೆ.

**ವಿದ್ಯಾರ್ಥಿಗಳ ಪ್ರವೇಶ ನಿಯಮ ಏನು?**

ನಿಜವಾದ ಸ್ಪರ್ಧೆ ಶುರುವಾಗುತ್ತದೆ. ಅದಕ್ಕಾಗಿ ನಾವು ಸಿದ್ಧರಾಗಬೇಕು.

**ಈ ವಿವಿ ಆರಂಭಿಸುವಾಗ ಬೇರಾವುದೇ ವಿವಿಯನ್ನು ಮಾದರಿ ಅಂತ ಇಟ್ಟುಕೊಂಡಿದ್ದಿರಾ?**

ಸಿಂಗಾಪುರ, ಅಮೆರಿಕನ್, ಯುಕೆ, ಜರ್ಮನಿ ಹೀಗೆ ಹಲವು ವಿವಿಗಳನ್ನು ಗಮನದಲ್ಲಿಟ್ಟುಕೊಂಡಿದ್ದೆವು. ಇಲ್ಲಿ ಶೇ.70ರಷ್ಟು ಇಂಗ್ಲೆಂಡ್‌ನ ವಿವಿಗಳ ಪರಿಕಲ್ಪನೆ ಇದೆ. 10ರಿಂದ 15ರಷ್ಟು ಜರ್ಮನ್ ವಿವಿ ಮಾದರಿ ಹಾಗೂ ಉಳಿದದ್ದು ನಮ್ಮ ಭಾರತೀಯ ಮಾದರಿಯಲ್ಲಿದೆ. ಬೋಧನಾಕ್ರಮ ಸ್ವಲ್ಪ ಮಟ್ಟಿಗೆ ಯುಕೆ ಮಾದರಿಯಲ್ಲಿದ್ದರೆ ಸಂಶೋಧನೆಯಲ್ಲಿ ಅಮೆರಿಕನ್ ಮಾದರಿಯನ್ನು ಅನುಸರಿಸುತ್ತಿದ್ದೇವೆ.

**ಮುಂದಿನ ಯೋಜನೆ ಏನು?**

ಮೊದಲ ಐದು ವರ್ಷಗಳಲ್ಲಿ ನಮ್ಮ ವಿವಿ ಭಾರತದಲ್ಲಿ ಜನಪ್ರಿಯಗೊಳ್ಳಬೇಕು. ಏಳು ವರ್ಷಗಳಲ್ಲಿ ಎಲ್ಲಾ ಅಕ್ರೆಡಿಟೇಷನ್ ಕಾರ್ಯ ಪೂರ್ಣಗೊಳ್ಳಬೇಕು. 10 ವರ್ಷಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲೂ ಬೆಳೆಯಬೇಕು. ಜಾಗತಿಕ ಮನ್ನಣೆಯ ವಿವಿ ಇದಾಗಬೇಕೆಂಬ ಕನಸು ನಮ್ಮದು. ■

vk Classifieds